"1999ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ತಿದ್ದುಪಡಿಯಾದಂತೆ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

8. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಬಿ.ಬಿ. ಶಿವಪ್ಪನವರು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಬಿಜಾಪುರ ತಾಲ್ಲೂಕಿನಲ್ಲಿ ಇಬ್ಬರು ರೈತರು ಆತ್ಮಹುತಿ ಮಾಡಿಕೊಂಡಿರುವುದು.

+ ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಪ್ಪ (ತ್ರಿಕೋಟಾ) : ಮಾನ್ಯ ಛೇರ್ಮನರೇ, ಬಿಜಾಪುರ ತಾಲ್ಲೂಕಿನಲ್ಲಿ ಇಬ್ಬರು ರೈತರು ಪುನಃ ಆತ್ಮಹುತಿ ಮಾಡಿಕೊಂಡಿರುವ ಬಗ್ಗೆ ಅನೇಕ ಪತ್ರಿಕೆಗಳಲ್ಲಿ ನಿನ್ನೆ ಬಂದಿದೆ. ಇದರ ಬಗ್ಗೆ ಸರ್ಕಾರದವರು ಪರಿಹಾರ ಕೊಡಬೇಕು ಎನ್ನುವ ದೃಷ್ಟಿಕೋನ ಇಟ್ಟುಕೊಂಡು ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ಜಂಟಿ ಸದನ ಸಮಿತಿ ರಚನೆಯಾಗಿ, ಆ ಸಮಿತಿ ವರದಿ ಕೊಟ್ಟು ಇನ್ನೂ ಎರಡು ತಿಂಗಳು ಆಗಿಲ್ಲ, ಇಂಥ ಸನ್ನಿವೇಶದಲ್ಲಿ ಪುನಃ ಇದೇ ರೀತಿಯ ಘಟನೆ ಸಂಭವಿಸಿರತಕ್ಕಂಥದ್ದು ಬಹಳ ದುಃಖಕರವಾದ ಸಂಗತಿ. ಈ ಘಟನೆ ಸಂಭವಿಸುವುದಕ್ಕಿಂತ ಮುಂಚೇನೆ ಆತ್ಮಹುತಿ ಮಾಡಿಕೊಂಡಿರುವ ಆ ಇಬ್ಬರು ರೈತರು ಈಗಾಗಲೇ ಇದರ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಅರ್ಜಿ ಕೊಟ್ಟಿದ್ದರು. ಜನವರಿಯಲ್ಲಿ ಆಲಿಕಲ್ ಮಳೆಯಾಗಿ ಬಿಜಾಪುರದಲ್ಲಿ ಒಬ್ಬ ದ್ರಾಕ್ಷಿ ಬೆಳೆಗಾರ ಆತ್ಮಹುತಿ ಮಾಡಿಕೊಂಡಿದ್ದಾನೆ. ಮತ್ತೊಂದು ಕಡೆ ಹಿಟ್ನಳ್ಳಿ ಎನ್ನುವ ಗ್ರಾಮದಲ್ಲಿ ಮಲ್ಲಪ್ಪ ಬಸಪ್ಪ ಕೊರ್ತಿ ಎನ್ನುವವನು ಆತ್ಮಹುತಿ ಮಾಡಿ ಕೊಂಡಿದ್ದಾನೆ. ಒಂದೇ ತಿಂಗಳಲ್ಲಿ ಇಬ್ಬರು ಆತ್ಮಹುತಿ ಮಾಡಿಕೊಂಡಿರುವ ಘಟನೆ ನಡೆದಿದೆ. ಇಂಥ ಸಮಸ್ಯೆಗಳಿಗೆ ಸರ್ಕಾರ ಯಾವರೀತಿ ಪರಿಹಾರ ಕೊಡಬೇಕು ಎನ್ನುವುದಕ್ಕಾಗಿಯೇ ಜಂಟಿ ಸದನ ಸಮಿತಿಯನ್ನು ರಚಿಸಲಾಗಿತ್ತು. ಆ ಸಮಿತಿಯವರು ಈಗಾಗಲೇ ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದಾರೆ. ನಾನು ತಮ್ಮಲ್ಲಿ ಏನು ಕೇಳಿಕೊಳ್ಳುತ್ತೇನೆಂದರೆ, ಇಂಥ ಘಟನೆ ನಡೆದಿದೆ ಎಂದು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರೂ ಕೂಡ ಅವರು ಇದಕ್ಕೆ ಪರಿಹಾರ ಕಂಡುಕೊಳ್ಳತಕ್ಕಂಥ ಪ್ರಯತ್ನ ಮಾಡದೇ ಇರುವುದನ್ನು ನೋಡಿದರೆ ಬಹುಶಃ ನನಗನ್ನಿಸುತ್ತದೆ ಇಂಥ ಘಟನೆಗಳು ನಡೆಯದಂತೆ ತೆರೆ ಎಳೆಯುವುದಕ್ಕೆ ಸಾಧ್ಯವಾಗಲಿಕ್ಕಿಲ್ಲ.

5.50 ಪಿಎಂ.

ದಿನಾಂಕ 12-2-1998ರಂದು ಜಿಲ್ಲಾಧಿಕಾರಿಗಳಿಗೆ ಅರ್ಜಿ ಕೊಟ್ಟಿರುವುದನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಮತ್ತೆ ಇದೇ ರೈತ ಮೊನ್ನೆ ಮಾರ್ಚ್ 29ನೇ ತಾರೀಖು ಆತ್ಮಹುತಿ ಮಾಡಿಕೊಂಡಿದ್ದಾನೆ. ಇದಕ್ಕಿಂತಲೂ ಪೂರ್ವದಲ್ಲಿ ಮಾರ್ಚ್ 19ನೇ ತಾರೀಖು ಇಂಥ ಒಂದು ಘಟನೆ ನಡೆದಿದೆ. ಇಂಥ ಘಟನೆಗಳು ಮೇಲಿಂದ ಮೇಲೆ ಆಗತಕ್ಕಂಥ ಈ ಸಂದರ್ಭದಲ್ಲಿ ಇವತ್ತು ಶಾಸಕರಾಗಿ ಮಾಡಿರತಕ್ಕಂಥ ಪ್ರಯತ್ನವನ್ನು ನಾವು ಮಾಡಿರುತ್ತೇವೆ. ಆದರೆ ಅಲ್ಲಿರತಕ್ಕಂಥ ಜಿಲ್ಲಾಧಿಕಾರಿಗಳು

ಯಾವುದೇ ಒಂದು ಕ್ರಮ ಕೈಗೊಂಡಿಲ್ಲ. ಇಂಥ ಘಟನೆಗಳು ಆಗತಕ್ಕಂಥದ್ದು ನಿಜವಾಗಿಯೂ ಬಹಳ ದುಃಖಿಕರವಾದ ಸಂಗತಿಯಾಗಿದೆ. ಇದಕ್ಕೆ ಸರ್ಕಾರ ಯಾವರೀತಿಯಿಂದ ಉತ್ತರ ಕೊಡುತ್ತದೆಯೋ ನನಗಂತೂ ಗೊತ್ತಿಲ್ಲ. ಸದನ ಸಮಿತಿಯು, ಬೆಳೆ ನಾಶವಾಗಿರುವವರಿಗೆ ಮತ್ತು ಬೆಳೆ ನಷ್ಟದಿಂದ ಆತ್ಮಹುತಿ ಮಾಡಿಕೊಂಡಂಥ ರೈತರಿಗೆ ಪರಿಹಾರ ಕೊಡುವ ಬಗ್ಗೆ ಮತ್ತು ಅನೇಕ ಮಾರ್ಗ ಸೂಚಿಗಳನ್ನು ಸೂಚಿಸಿದೆ. ಆದ್ದರಿಂದ ಸರ್ಕಾರ ಇವತ್ತು ಯಾವರೀತಿಯ ಪರಿಹಾರವನ್ನು ಇವರಿಗೆ ಕೊಡುತ್ತದೆ ಎಂಬುದನ್ನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) : ಮಾನ್ಯ ಛೇರ್ಮನ್‌ರವರೆ, ದಿನಾಂಕ 8-2-1999 ರಂದು ಬಿದ್ದ ಆಲಿಕಲ್ಲು ಮಳೆಯಿಂದ ದ್ರಾಕ್ಷಿ ಮತ್ತು ಮಾವಿನ ಫಸಲು ಹಾನಿಗೊಂಡಿರುತ್ತದೆ. ಇದರಲ್ಲಿ ಸವನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದ ಶ್ರೀ ಶಿವನಗೌಡ ಅವಳಪ್ಪ ಬಿರಾದಾರ್, ಇವರ ದ್ರಾಕ್ಷಿ ಬೆಳೆಯು ಹಾನಿಗೊಂಡಿರುತ್ತದೆ. ತೋಟಗಾರಿಕೆ ಇಲಾಖೆಯ ವರದಿ ಅನ್ವಯ 0.80 ಹೆಕ್ಟೇರ್ ದ್ರಾಕ್ಷಿ ಬೆಳೆ ನಾಶವಾಗಿರುತ್ತದೆ. ಇದರ ಅಂದಾಜು 1 ಲಕ್ಷ 80 ಸಾವಿರ ರೂಪಾಯಿಗಳ ಹಾನಿ ಸಂಭವಿಸಿರುತ್ತದೆ. ಸದರಿಯವರು ದ್ರಾಕ್ಷಿ ಬೆಳೆ ಹಾನಿಯಾಗಿದ್ದರಿಂದ, ಸಾಲ ತೀರಿಸಲಾಗದೆ, ದಿನಾಂಕ 31-3-99ರಂದು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ವರದಿಯಾಗಿರುತ್ತದೆ. ಇವರ ಆತ್ಮಹತ್ಯೆ ಪ್ರಕರಣದ ಬಗ್ಗೆ ತನಿಖೆ ನಡೆಸಲಾಗುತ್ತಿದ್ದು ವಿವರವಾದ ವರದಿಯನ್ನು ನಂತರ ಸರ್ಕಾರಕ್ಕೆ ಸಲ್ಲಿಸುವುದಾಗಿ ಬಿಜಾಪುರದ ಜಿಲ್ಲಾಧಿಕಾರಿಗಳು ಸ್ಪಷ್ಟಪಡಿಸಿರುತ್ತಾರೆ. ಹಾಗೆಯೇ, ಹಿಟ್ನಹಳ್ಳಿ ಗ್ರಾಮದ ಶ್ರೀ ಮಲ್ಲಪ್ಪ ಬಸಪ್ಪ ಕೂರ್ತಿಯವರು ದಿನಾಂಕ 18-3-99ರಂದು ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವುದು ಸಹ ವರದಿಯಾಗಿರುತ್ತದೆ. ಮೃತರ ಹೆಸರಿನಲ್ಲಿ ಯಾವುದೇ ಜಮೀನು ಇರಲಿಲ್ಲ. ಆದರೆ, ಚಿಕ್ಕಪ್ಪನಾದ ಶ್ರೀ ಭೀಮಪ್ಪನ ಹೆಸರಿನಲ್ಲಿ ಕದ್ನಹಳ್ಳಿ ಗ್ರಾಮದಲ್ಲಿ 4ಎಕರೆ 10ಗುಂಟೆ ಹಾಗೂ ಹಿಟ್ನಹಳ್ಳಿ ಗ್ರಾಮದಲ್ಲಿ 5 ಎಕರೆ 2 ಗುಂಟೆ ಜಮೀನು ಇರುತ್ತದೆ. ಸುಮಾರು 6 ವರ್ಷಗಳ ಹಿಂದೆ ಕಿರಾಣಿ ಅಂಗಡಿ ಮಾಡುವ ಉದ್ದೇಶದಿಂದ ಶ್ರೀ ಸಿದ್ದೇಶ್ವರ ಬ್ಯಾಂಕ್, ಬಿಜಾಪುರ, ಇಲ್ಲಿ 25,000 ರೂಪಾಯಿಗಳ ಸಾಲ ಪಡೆದಿದ್ದು, ಈ ಸಾಲವನ್ನು ಮರುಪಾವತಿ ಮಾಡಿರುವುದಿಲ್ಲ ಮತ್ತು ಪಿ.ಎಲ್.ಡಿ. ಬ್ಯಾಂಕಿನಿಂದ 79,900 ರೂಪಾಯಿಗಳ ಸಾಲವನ್ನು ಪಡೆದು ನಾಲ್ಕು ಕೊಳವೆ ಬಾವಿಗಳನ್ನು ತೆಗೆಸಿದ್ದು, ಇದರಲ್ಲಿ ಮೂರು ಸಂಪೂರ್ಣವಾಗಿ ವಿಫಲವಾಗಿರುತ್ತವೆ. ಉಳಿದ ಒಂದು ಕೊಳವೆ ಬಾವಿಯಿಂದ ಬಂದ ಅಲ್ಪ ಪ್ರಮಾಣದ ನೀರಿನಿಂದ ನಿರೀಕ್ಷಿತ ಫಲ ದೊರಕಿರುವುದಿಲ್ಲ. ಜೀವನ ಮತ್ತು ತೋಟದ ನಿರ್ವಹಣೆಗಾಗಿ ಖಾಸಗಿ ಮೂಲಗಳಿಂದ ಸಾಲ ಪಡೆದಿದ್ದು, ಈ ಸಾಲಗಳ ಮರುಪಾವತಿಗೆ ಒತ್ತಾಯ ಹೆಚ್ಚಿದಾಗ ಸಾಲ ತೀರಿಸಲು ಮಾಡಿದ ಯತ್ನಗಳು ವಿಫಲವಾಗಿದ್ದರಿಂದ ಜೀವನದಲ್ಲಿ ಜಿಗುಪ್ಸೆಗೊಂಡು ಆತ್ಮಹತ್ಯೆ ಮಾಡಿಕೊಂಡಿರಬಹುದೆಂದು ಪಂಚನಾಮೆಯಿಂದ ತಿಳಿದು ಬಂದಿರುತ್ತದೆ. ಭಾರತ ಸರ್ಕಾರವು ಡಿಸೆಂಬರ್ 1998ರಲ್ಲಿ ಕೀಟ ಬಾಧೆಯಿಂದ ಹಾನಿಗೊಳ್ಳುವ ಕೃಷಿ ಬೆಳೆಯನ್ನು ನೈಸರ್ಗಿಕ ವಿಕೋಪವೆಂದು ಪರಿಗಣಿಸಿರುತ್ತದೆ. ಆದರೆ, ಮೇಲಿನ ಎರಡು ಪ್ರಕರಣಗಳಲ್ಲಿ ಹೆಚ್ಚಿನ ಮಳೆ ಹಾಗೂ ಜಲಾಭಾವದಿಂದ ಕೃಷ್ಟಿ ನಿರ್ವಹಣೆ ನಿರೀಕ್ಷಿತ ಮಟ್ಟ ಮುಟ್ಟದೇ ರೈತರು ಆತ್ಮಹತ್ಯೆ ಮಾಡಿಕೊಂಡಿರುವುದು ಕಂಡುಬಂದಿರುತ್ತದೆ. ಈ ಹಿನ್ನಲೆಯಲ್ಲಿ ಮೇಲಿನ ಎರಡು ಪ್ರಕರಣಗಳಲ್ಲಿ ಪ್ರಕೃತಿ ವಿಕೋಪ ನಿಧಿಯಿಂದ

ಅನುಕಂಪ ಭತ್ಯೆ ನೀಡಬೇಕೆ ಅಥವಾ ಇಲ್ಲವೇ ಎಂಬುದರ ಬಗ್ಗೆ ನಾವು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಶಿವಾನಂದ ಪಾಟೀಲ್ : ಮಾನ್ಯ ಛೇರ್ಮನ್‌ರವರೆ, ಕಳೆದ ಜನವರಿ ತಿಂಗಳಲ್ಲಿ ಪರಿಹಾರ ನೀಡುವ ಬಗ್ಗೆ ಸದನ ಸಮಿತಿ ವರದಿಯನ್ನು ಕೊಟ್ಟಿದೆ. ಈ ಘಟನೆ ಆಗುವುದಕ್ಕಿಂತ ಪೂರ್ವದಲ್ಲಿ, ಸವನಹಳ್ಳಿ ಗ್ರಾಮದಲ್ಲಿ ಬಿರಾದಾರ್ ಎಂಬ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡ ನಂತರ, ಇವರಿಗೆ ಸಂಬಂಧಪಟ್ಟ ಬೆಳೆ ಎಷ್ಟು ಹಾನಿ ಆಗಿದೆ ಎಂಬುದರ ಬಗ್ಗೆ ಸ್ವತಃ ನಾನು ಮತ್ತು ಜಿಲ್ಲೆಯ ದ್ರಾಕ್ಷಿ ಬೆಳೆಗಾರರೆಲ್ಲರೂ ಹೋಗಿ ಜಿಲ್ಲಾಧಿಕಾರಿಯವರಿಗೆ ತಿಳಿಸಿದ್ದೇವೆ. ಹಾಗೆಯೇ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಬೆಳೆ ಹಾನಿಯಾಗಿರುವ ಬಗ್ಗೆ ಮಾಹಿತಿಯನ್ನು ಜಿಲ್ಲಾಧಿಕಾರಿಯವರಿಗೆ ಕೊಟ್ಟಿದ್ದಾರೆ. ಇಷ್ಟೆಲ್ಲಾ ಆದರೂ ಸಹ, ನನ್ನೆಯವರಿಗೂ ಕೂಡ ಜಿಲ್ಲಾಧಿಕಾರಿಯವರು ಯಾವುದೇ ಕ್ರಮ ಕೈಗೊಂಡಿಲ್ಲ. ಇವತ್ತು ನೀವು ಪರಿಹಾರ ಕೊಡಬಹುದು. ಆದರೆ ಪರಿಹಾರ ಕೊಡುವುದಕ್ಕಿಂತಲೂ, ಅವರ ಕುಟುಂಬದವರಿಗೆ ಸಾಂತ್ವನ ಹೇಳತಕ್ಕಂಥದ್ದು, ಮತ್ತು ಬಡ್ಡಿ ರಹಿತ ಸಾಲ ಕೊಡುತ್ತೇವೆಂದಾಗಲಿ ಅಥವಾ ಈಗ ಇರತಕ್ಕಂಥ ಸಾಲವನ್ನು ರೀಷೆಡ್ಯೂಲ್ ಮಾಡಿಕೊಡುತ್ತೇವೆ ಎನ್ನತಕ್ಕಂಥ ಭರವಸೆಯಾಗಲಿ ಅಥವಾ ಈಗ ಆಗಿರತಕ್ಕಂಥ ಹಾನಿಯನ್ನು ಸರ್ಕಾರದ ಗಮನಕ್ಕಾದರೂ ತಂದು ನಿಮಗೆ ಪರಿಹಾರ ಕೊಡಿಸುತ್ತೇನೆ ಎನ್ನತಕ್ಕಂಥ ಮಾತನ್ನು ಈ ಜಂಟಿ ಸದನ ಸಮಿತಿಯ ವರದಿ ಬಂದರೂ ಸಹ ಇವತ್ತು ಇಡೀ ರಾಜ್ಯದಲ್ಲಿರತಕ್ಕಂಥ ಜಿಲ್ಲಾಧಿಕಾರಿಗಳು ಯಾವುದೇ ಒಂದು ಕ್ರಮ ಕೈಗೊಂಡಿಲ್ಲವೆಂದರೆ, ಇದಕ್ಕಿಂತ ವಿಷಾದಕರ ಸಂಗತಿ ಇನ್ನಾವುದೂ ಇಲ್ಲ. ಇಂಥ ಘಟನೆಗಳು ಸರ್ಕಾರ ಅಥವಾ ಜಿಲ್ಲಾಧಿಕಾರಿಗಳ ಗಮನಕ್ಕೆ ಬಂದ ಮೇಲೆ, ತತ್‌ಕ್ಷಣ ಏನಾದರೂ ಕ್ರಮ ಕೈಗೊಳ್ಳುವಂತೆ, ಜಿಲ್ಲಾಧಿಕಾರಿಯವರಿಗೆ ಸರ್ಕಾರದಿಂದ ಒಂದು ಸೂಚನೆ ಹೋಗಬೇಕು. ಪರಿಹಾರ ಬೇಕಾದರೆ ಆಮೇಲೆ ಕೊಡಲಿ, ಮೊದಲು ಇದಕ್ಕೋಸ್ಕರ ಸರ್ಕಾರದಿಂದ ಏನೊಂದು ಪ್ರಯತ್ನ ನಡೆಯುತ್ತಿದೆ ಹಾಗೂ ಜಿಲ್ಲಾಧಿಕಾರಿಯವರು ಕೇಳಿದರು ಎನ್ನತಕ್ಕಂಥ ಭರವಸೆ ರೈತರ ಮನಸ್ಸಿನಲ್ಲಿ ಬಂದರೆ, ಇಂಥ ಘಟನೆಗಳು ಮರುಕಳಿಸುವುದು ನಿಲ್ಲುತ್ತದೆಂದು ನನಗನಿಸುತ್ತದೆ. ಇವತ್ತು ಈ ಎರಡು ಘಟನೆಗಳನ್ನು ನೋಡಿದರೆ, ಇನ್ನು ಎಷ್ಟು ಜನ ಈ ರೀತಿ ಆತ್ಮಾಹುತಿ ಮಾಡಿಕೊಳ್ಳುವ ಪರಿಸ್ಥಿತಿ ಬರುತ್ತದೆಯೋ ಗೊತ್ತಿಲ್ಲ. ಇವತ್ತಿನ ದಿವಸ ಜಂಟಿ ಸದನ ಸಮಿತಿ ವರದಿ ಕೊಟ್ಟಾಯಿತು ಮತ್ತು ಸರ್ಕಾರ ವೈಯಕ್ತಿಕ ಗಮನ ಹರಿಸಿದ್ದಾಯಿತು. ಈ ವಿಚಾರ ಜಿಲ್ಲಾಧಿಕಾರಿಯವರ ಗಮನಕ್ಕೆ ಬಂದಮೇಲೆ ವೈಯಕ್ತಿಕ ಗಮನಹರಿಸುವ ಪ್ರಯತ್ನವಾದರೂ ಇನ್ನು ಮೇಲೆ ಮಾಡುವುದಕ್ಕೆ ತಮ್ಮ ಕಾಲದಲ್ಲಿಯಾದರೂ ತಾವು ಮಾಡಬೇಕು ಮತ್ತು ಪರಿಹಾರ ಕೊಡುವುದಕ್ಕೆ ಬಹಳ ದಿವಸ ಬೇಕಾಗಿಲ್ಲ. ತತ್‌ಕ್ಷಣ ಇಂಥ ಘಟನೆ ಸಂಭವಿಸಿದಂಥ ಸಂದರ್ಭದಲ್ಲಿ ಕನಿಷ್ಠ ಪಕ್ಷ ಎರಡು ಲಕ್ಷ ರೂಪಾಯಿಗಳ ಪರಿಹಾರ ಕೊಡಬೇಕೆಂದು ಸದನ ಸಮಿತಿಯ ವರದಿಯಲ್ಲಿದೆ. ಮಾನ್ಯ ಪುಟ್ಟೇಗೌಡರು ಈ ಸದನ ಸಮಿತಿಯಲ್ಲಿದ್ದು, ಅನಂತರ ರಾಜೀನಾಮೆ ಕೊಟ್ಟಂತಹ ಸದಸ್ಯರು ಮತ್ತು ಈ ಸಮಿತಿಯಲ್ಲಿ ಮಾನ್ಯ ಮಾಧುಸ್ವಾಮಿಯವರು ಹಾಗೂ ನಾನು ಕೂಡ ಈ ಸಮಿತಿಯ ಸದಸ್ಯನಾಗಿದ್ದೇನೆ. ಇಂಥ ಘಟನೆಗಳು ನಡೆದಂಥ ಸಂದರ್ಭದಲ್ಲಿ ಏನಾದರೂ ಪರಿಹಾರ ತಂದು ಕೊಡತಕ್ಕಂಥ ಪ್ರಯತ್ನವನ್ನು ಜಿಲ್ಲಾಧಿಕಾರಿಗಳು ಮಾಡಿದರೆ, ಮುಂದೆ ಆಗತಕ್ಕಂಥ ಘಟನೆಗಳು ನಿಲ್ಲುತ್ತದೆ ಎಂದು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸುವಂಥ ಪ್ರಯತ್ನ ಮಾಡಿದ್ದೇನೆ ಮತ್ತು ಮಾನ್ಯ ಮಂತ್ರಿಗಳು

ಈಗಾಗಲೇ ತಿಳಿಸಿರುವ ಘಟನೆಗಳ ಬಗ್ಗೆ ಪುನಃ ಪರಿಶೀಲನೆ ಮಾಡುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೀರಿ. ಹಿಟ್ನಹಳ್ಳಿ ಗ್ರಾಮದಲ್ಲಿ ತೀರಿಕೊಂಡಿರುವ ಕೂರ್ತಿ ಎಂಬುವರ ಬಗ್ಗೆ ಪೊಲೀಸ್ ಚಾರ್ಜಶೀಟ್ ಕೂಡ ಇವತ್ತು ತಮಗೆ ಬಂದಿದೆ. ಆದ್ದರಿಂದ, ಇದನ್ನು ಪುನಃ ಪರಿಶೀಲನೆ ಮಾಡದೆ ಏನಾದರೂ ತತ್‌ಕ್ಷಣ ಪರಿಹಾರ ತಂದುಕೊಡತಕ್ಕಂಥ ಪ್ರಯತ್ನವನ್ನು ತಾವು ಮಾಡಿದರೆ ಸ್ವಲ್ಪವಾದರೂ ಸಾಂತ್ವನ ಹೇಳತಕ್ಕಂಥದ್ದು ಆಗುತ್ತದೆಂದು ತಮ್ಮ ಮೂಲಕ ಸಚಿವರಲ್ಲಿ ವಿನಂತಿಸಿಕೊಳ್ಳತಕ್ಕಂಥ ಪ್ರಯತ್ನವನ್ನು ಮಾಡುತ್ತಿದ್ದೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸನ್ಮಾನ್ಯ ಛೇರ್ಮನ್‌ರವರೆ, ಜಂಟಿ ಸದನ ಸಮಿತಿಯ ವರದಿಯಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬದವರಿಗೆ, ಸರ್ಕಾರ ಪರಿಶೀಲನೆ ಮಾಡಿ ಅವರಿಗೆ ಸಾಂತ್ವನ ಮತ್ತು ಹಣವನ್ನು ಕೊಡುವುದಕ್ಕಿಂತ ಯಾವುದಾದರೂ ಒಂದು ಉದ್ಯೋಗ ಕೊಡತಕ್ಕಂಥ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಮೃತರ ಕುಟುಂಬದವರಿಗೆ ಉದ್ಯೋಗ ಕೊಡಬೇಕೆಂದು ಜಂಟಿ ಸದನ ಸಮಿತಿಯವರು ಶಿಫಾರಸ್ಸು ಮಾಡಿದ್ದಾರೆ. ಇದಕ್ಕೆ ತಮ್ಮ ಅಭಿಪ್ರಾಯ ಏನು? ಇವರಿಗೆ 50 ಸಾವಿರ ಅಥವಾ ಒಂದು ಲಕ್ಷ ಪರಿಹಾರ ಕೊಟ್ಟರೆ ಸಾಕೆ ?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) : ಮಾನ್ಯ ಛೇರ್ಮನ್‌ರವರೆ, ವೈಯಕ್ತಿಕ ಕಾರಣಗಳಿಂದ ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥದ್ದು ಮತ್ತು ಬೇರೆ ಬೇರೆ ಕಾರಣಗಳಿಂದ ಆತ್ಮಹತ್ಯೆ ಮಾಡಿಕೊಳ್ಳುವುದು ಸಹಜ. ಎಲ್ಲಾ ಪ್ರಕರಣಗಳಿಗೂ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದಲೇ ಪರಿಹಾರ ಕೊಡಬೇಕೆಂಬುದಕ್ಕೆ ಕೊನೆಯೇ ಇಲ್ಲವೇನೋ ? ಮಾನ್ಯ ಸದಸ್ಯರು ಹೇಳಿದಂತೆ, ಅವರಿಗೆ ಸಾಂತ್ವನ ಹೇಳುವುದಕ್ಕೆ ಮತ್ತು ಜಿಲ್ಲಾಧಿಕಾರಿಗಳು ಮತ್ತೆ ಅವರ ಕುಟುಂಬದವರನ್ನು ನೋಡುವುದಕ್ಕೆ ಹೇಳುತ್ತೇವೆ ಮತ್ತು ಇದನ್ನು ಮತ್ತೆ ಪರಿಶೀಲನೆ ಮಾಡಿ ವರದಿ ಕಳುಹಿಸಿಕೊಡಿ ಎಂದು ಹೇಳುತ್ತೇವೆ. ಸರ್ಕಾರದಿಂದ ಸಾಂತ್ವನ ಹೇಳುವುದಕ್ಕೆ ಮತ್ತು ಕಾನೂನು ಅಡಿಯಲ್ಲಿ ಯಾವ ರೀತಿಯಿಂದ ಸಹಾಯ ಮಾಡಬಹುದೋ ಅದನ್ನೆಲ್ಲಾ ಮಾಡುವುದಕ್ಕೆ ನಾನು ಸೂಚನೆ ಕೊಡುತ್ತೇನೆಂದು ತಮ್ಮ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಛೇರ್ಮನ್ : ಶಿವಾನಂದ ನಾಯಕ್‌ರವರೆ, ತಾವು ಪ್ರಸ್ತಾಪ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಛೇರ್ಮನ್‌ರವರೆ, ಚಾಮರಾಜನಗರದ ಆಸ್ಪತ್ರೆಯಲ್ಲಿ ವ್ಯವಸ್ಥೆ ಸರಿ ಇಲ್ಲದೇ ಇರುವುದರಿಂದ ಅಲ್ಲಿನ ಜನರಿಗೆ ಬಹಳ ಅನ್ಯಾಯವಾಗಿದೆ ಎಂದು ಬೆಳಿಗ್ಗೆಯಿಂದ ಪ್ರಸ್ತಾಪ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇನೆ. ಆದ್ದರಿಂದ ತಾವು ನನಗೆ ಮೊದಲು ಅವಕಾಶ ಕೊಡಬೇಕು.

ಛೇರ್ಮನ್ : ಇಲ್ಲಿರತಕ್ಕಂಥ ಪಟ್ಟಿ ಪ್ರಕಾರ ಮಾನ್ಯ ಶಿವಾನಂದ ನಾಯಕರವರ ಹೆಸರು ಇದೆ. ಆದ್ದರಿಂದ, ಅವರು ಪ್ರಸ್ತಾಪ ಮಾಡಿದ ನಂತರ ತಾವು ಪ್ರಸ್ತಾಪ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಅಲ್ಲಿನ ಜನರಿಗೆ ಅನ್ಯಾಯವಾಗಿದೆ ಎಂದು ನಾನು ಬೆಳಿಗ್ಗೆಯಿಂದ ಪ್ರಸ್ತಾಪ ಮಾಡುತ್ತಿದ್ದೇನೆ. ನೀವು ನನಗೆ ಮೊದಲು ಅವಕಾಶ ಕೊಡದಿದ್ದರೆ ನಾನು ಧರಣಿ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್‌ನಾಗರಾಜ್‌ರವರು ಸದನದ ಬಾವಿಗೆ ಬಂದು ಧರಣಿ ಕುಳಿತರು)

(ಅ) ಭಟ್ಕಳದಲ್ಲಿ ನಡೆದಂತಹ ಕೋಮುಗಲಭೆಗಳ ಬಗ್ಗೆ ಜಗನ್ನಾಥ್‌ಶೆಟ್ಟಿ ಆಯೋಗದ ವರದಿ ಕುರಿತು

ಶ್ರೀ ಶಿವಾನಂದ ನಾಯಕ್ (ಭಟ್ಕಳ) : ಮಾನ್ಯ ಛೇರ್ಮನ್‌ರವರೆ, ಭಟ್ಕಳದಲ್ಲಿ 1978, 1989 ಮತ್ತು 1991ಹಾಗೂ 1993ರಲ್ಲಿ ನಿರಂತರವಾಗಿ 10 ತಿಂಗಳ ಕಾಲ ಕೋಮುಗಲಭೆ ನಡೆಯಿತು. ಈ ಕೋಮು ಗಲಭೆಗಳ ಕುರಿತು ವಿಚಾರಣೆ ನಡೆಸುವುದಕ್ಕೆ ಜಗನ್ನಾಥ ಶೆಟ್ಟಿ ಆಯೋಗವನ್ನು ಸರ್ಕಾರ ನೇಮಕ ಮಾಡಿತ್ತು. ಸದರಿ ಆಯೋಗ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ ಈಗಾಗಲೇ ಎರಡೂವರೆ ವರ್ಷ ಆಗಿದೆ. ಆದರೆ, ಸರ್ಕಾರ ಈ ವರದಿಯನ್ನು ಮುಚ್ಚಿಟ್ಟಿದೆ. ಈ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ನಂತರ, ಇಲ್ಲಿನ ಕೋಮುಗಲಭೆಗೆ ಭಾಗವಹಿಸಿ ರಾಷ್ಟ್ರ ದ್ರೋಹಿ ಕೆಲಸ ಮಾಡಿದಂಥ ಆ ಕೊಲೆಗಡುಕರಿಗೆ ನಮ್ಮ ಮೇಲೆ ಕ್ರಮ ಕೈಗೊಳ್ಳಬಹುದೆಂಬ ಭಯಭೀತಿ ಅವರಿಗೆ ಇತ್ತು. ಸರ್ಕಾರ ಈ ವರದಿಯನ್ನು ಮುಚ್ಚಿಟ್ಟ ನಂತರ ಇವತ್ತು ಮತ್ತೆ ಅವರೆಲ್ಲಾ ಬೀದಿಗೆ ಇಳಿದಿದ್ದಾರೆ. 1993ರಲ್ಲಿದ್ದಂಥ ಸರ್ಕಾರ ಮತ್ತು ಅಧಿಕಾರಿಗಳು ಶಾಮೀಲಾಗಿ ಈ ರೀತಿ ಕೋಮು ಗಲಭೆ ಆಗುವುದಕ್ಕೆ ಕಾರಣ ಆಯಿತು. ಇದರಲ್ಲಿ ಐ.ಎ.ಎಸ್. ಅಧಿಕಾರಿಗಳ ಕೈವಾಡ ಇದೆ ಎಂದು ಹೇಳಲಾಗಿದೆ ಮತ್ತು 17 ಜನರ ಕೊಲೆಯಾಯಿತು ಮತ್ತು 5 ಜನರ ನಾಪತ್ತೆ ಆಯಿತು ಹಾಗೆಯೇ 18ನೇ ಯವರಾಗಿ ಈ ಮನೆಯ ಸದಸ್ಯರಾಗಿದ್ದಂಥ ಡಾ|| ಚಿತ್ತರಂಜನ್‌ರವರ ಕೊಲೆ ಆಯಿತು. ಈ ಹಿನ್ನೆಲೆಯಲ್ಲಿ ಮತ್ತೊಂದು ರಾಮಚಂದ್ರ ಆಯೋಗವನ್ನು ಸರ್ಕಾರ ರಚನೆ ಮಾಡಿದ್ದರು. ರಾಮಚಂದ್ರ ಆಯೋಗದ ವರದಿಯನ್ನು ಸರ್ಕಾರಕ್ಕೆ ಕೊಟ್ಟು ಒಂದೂವರೇ ವರ್ಷ ಆಗಿದ್ದು, ಸರ್ಕಾರ ಇದನ್ನು ಸಹ ಮುಚ್ಚಿಟ್ಟಿದ್ದಾರೆ. ಅಂದರೆ, ಇವರು ಕೊಲೆಗಡುಕರಿಗೆ ರಕ್ಷಣೆಯನ್ನು ಕೊಡುವಂತಹ ಕೆಲಸವನ್ನು ಈ ಜನತಾದಳ ಸರ್ಕಾರ ಮಾಡುತ್ತಿದೆ. ಹಿಂದಿನ ಸರ್ಕಾರ ಅವರಿಗೆ ಎಲ್ಲಾ ರೀತಿಯ ಸಹಕಾರವನ್ನು ಕೊಟ್ಟಿತು. ಅಂತಹ ಕೊಲೆಗಡುಕರ ರಕ್ಷಣೆಯನ್ನು ಮಾಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಇಲ್ಲವೆಂದರೆ, ಇದನ್ನು ಈ ಸದನದಲ್ಲಿ ಇವರು ಏಕೆ ಮಂಡಿಸುತ್ತಿಲ್ಲ. ಸಾರ್ವಜನಿಕರ ಕೋಟ್ಯಾಂತರ ರೂಪಾಯಿಗಳನ್ನು ವೆಚ್ಚ ಮಾಡಿ, ಆಯೋಗವನ್ನು ರಚನೆ ಮಾಡಿಕೊಂಡು ಆ ಆಯೋಗದ ವರದಿ ಇವತ್ತು ಏನು ಕೊಟ್ಟಿದೆ. ಇವತ್ತು ಅಲ್ಲಿ ಕೊಲೆಗಡುಕರಿಗೆ ಯಾರದೇ ಹಂಗಿಲ್ಲ. ಅವರಿಗೆ ಯಾವುದೇ ರೀತಿಯಲ್ಲಿ ಏನು ಮಾಡಿದರೂ ನಡೆಯುತ್ತದೆ ಎಂಬ ಮನೋಭಾವನೆ ಬಂದಿದೆ. ಅವರಿಗೆ ಆ ರೀತಿಯಲ್ಲಿ ರಕ್ಷಣೆಯನ್ನು ಕೊಡುತ್ತಿದ್ದಾರೆ. ದಯಮಾಡಿ ಭಟ್ಕಳದ ಜನರ ಹಿತದೃಷ್ಟಿಯಿಂದ ತಾವೇನು ಈ ವರದಿಯನ್ನು ಮುಚ್ಚಿಟ್ಟಿದ್ದೀರಿ ಇದರಿಂದ ನಾಳೇ 1993ರಲ್ಲಿ ನಡೆದಂತಹ ಪರಿಣಾಮ ಬರಬಹುದು. ದಯಮಾಡಿ ಈ ವರದಿಯನ್ನು ಸದನದಲ್ಲಿ ಮಂಡಿಸಿ ಸತ್ಯಾಂಶವನ್ನು ಜನರಿಗೆ ಮತ್ತು ರಾಜ್ಯಕ್ಕೆ ಹಾಗೂ ಭಟ್ಕಳದ ಜನರಿಗೆ ತಿಳಿಸುವಂಥ ಕೆಲಸವನ್ನು ತಾವು ದಯಮಾಡಿ ಮಾಡಬೇಕು. ಇಲ್ಲವೆಂದರೆ, ಇದರಲ್ಲಿ ಯಾರು ಶಾಮೀಲಾಗಿದ್ದಾರೋ ಅವರೊಂದಿಗೆ ನೀವು ಶಾಮೀಲಾಗಿ ನೀವು ಆ ಕೊಲೆಗಡುಕರಿಗೆ ರಕ್ಷಣೆಯನ್ನು ಕೊಡುತ್ತೀರಿ ಎನ್ನುವ ಭಾವನೆ ರಾಜ್ಯದ ಜನರಿಗೆ ಮತ್ತು ಭಟ್ಕಳದ ಜನರಿಗೆ ಬರುತ್ತದೆ. ದಯಮಾಡಿ ಆ ವರದಿಯನ್ನು ಸದನದಲ್ಲಿ ಮಂಡಿಸಬೇಕೆಂದು ಮತ್ತೊಮ್ಮೆ ನಾನು ವಿನಂತಿಮಾಡಿ ಕೊಳ್ಳುತ್ತಿದ್ದೇನೆ.